ಶ್ರೀ ಹೆಚ್.ಎಸ್. ಪ್ರಕಾಶ್ (ಹಾಸನ): ಮಾನ್ಯ ಅಧ್ಯಕ್ಷರೆ, ಹಾಸನ ನಗರಸಭಾ ಅಧ್ಯಕ್ಷರು ಮೊನ್ನೆ ಒಬ್ಬ ಕೌನ್ಸಿಲರ್ ಅನ್ನು kidnap ಮಾಡಿದ್ದಾರೆಂದು 15ನೇ ತಾರೀಖಿನ ದಿವಸ complaint ಅನ್ನು ಕೊಟ್ಟಿದ್ದೇವೆ. ದೂರನ್ನು ಕೊಟ್ಟು 18–20 ದಿವಸಗಳಾದರೂ ಕೂಡ ನಾಳೆ ದಿನ ಅಲ್ಲಿ ಅವಿಶ್ವಾಸ ನಿರ್ಣಯವನ್ನು ಮಂಡಿಸುತ್ತಿದ್ದಾರೆ. ಇವತ್ತು ಕೂಡ ಅಧ್ಯಕ್ಷರು ಮತ್ತು ಅವರ ಪತಿ, ಅವರ ತಮ್ಮ ಮತ್ತು ಕಾರಿನ ಡ್ರೈವರ್ ಇಷ್ಟು ಜನರ ಮೇಲೆ complaint lodge ಆಗಿದ್ದರೂ ಕೂಡ ಇವತ್ತಿನವರೆಗೂ ಕೂಡ ಅವರನ್ನು arrest ಮಾಡಿರುವುದಿಲ್ಲ. ಇಲ್ಲಿ ಪೊಲೀಸ್ ಇಲಾಖೆಯವರ involvement ಪೂರ್ತಿ ಇದೆ, ಇದರಲ್ಲಿ ಎರಡನೆ ಮಾತಿಲ್ಲ. ದಯಮಾಡಿ ಈ ಬಗ್ಗೆ ಈಗ ಏನು ಉತ್ತರವನ್ನು ಕೊಡದೆ ಇದ್ದರೆ ನಾನು ಧರಣಿಯನ್ನು ಹೂಡಬೇಕಾಗುತ್ತದೆ.

ಅಧ್ಯಕ್ಷರು: ಮಾನ್ಯ ಸಚಿವರು ಉತ್ತರವನ್ನು ತರಿಸಿಕೊಡುತ್ತಾರೆ.

ಶ್ರೀ ಕೆ.ಜೆ. ಜಾರ್ಜ್ (ಮಾನ್ಯ ಗೃಹ ಸಚಿವರು): ಈ ಬಗ್ಗೆ ಉತ್ತರವನ್ನು ತರಿಸಿಕೊಡುತ್ತೇನೆ.

ಅಧ್ಯಕ್ಷರು: ಮಾನ್ಯ ಸುನೀಲ್ ಕುಮಾರ್‌ರವರೆ ತಾವು ಕೇಳಿ.

3) **ವಿಷಯ:** ಶಿರಾಡಿಘಾಟ್ ರಸ್ತೆಯ ದುರಸ್ತಿ ಬಗ್ಗೆ.

====

ಶ್ರೀ ವಿ. ಸುನೀಲ್ ಕುಮಾರ್ (ಕಾರ್ಕಳ): ಮಾನ್ಯ ಅಧ್ಯಕ್ಷರೆ, ಶಿರಾಡಿ ಘಾಟ್ ಅನ್ನು ದುರಸ್ಥಿ ಮಾಡುವ ಹಿನ್ನೆಲೆಯಲ್ಲಿ ಇಡೀ ರಸ್ತೆಯನ್ನು ಅಲ್ಲಿ ಬಂದ್ ಮಾಡಿದ್ದಾರೆ. ಅದರಲ್ಲಿ ಮೊದಲನೆ ಹಂತದ ಕಾಮಗಾರಿಗೆ ಸಂಬಂಧಪಟ್ಟಂತೆ ಟೆಂಡರ್ ಪ್ರಕ್ರಿಯೆಗೆ ಸಂಬಂಧಪಟ್ಟಂತೆ ಕಾಮಗಾರಿ ನಡೆಯುತ್ತಿದೆ ಎಂದು ಗೊತ್ತಿದೆ. ಎರಡನೆ ಹಂತದ ಕಾಮಗಾರಿಗೆ ಸಂಬಂಧಪಟ್ಟಂತೆ ಟೆಂಡರ್ ಆಗಿಲ್ಲವೆಂದು ಈಗಿರುವಂತಹ ಮಾಹಿತಿ ಇದೆ. ಇದರ ಪರಿಣಾಮವಾಗಿ ಬೇರೆ ರಸ್ತೆಗಳಲ್ಲಿಯೂ ಕೂಡ ಸಂಚಾರ ದೊಡ್ಡಪ್ರಮಾಣದಲ್ಲಿ ಅಸ್ಥವ್ಯಸ್ಥವಾಗಿದೆ. ಅಲ್ಲಿ traffic jam ಆಗಿ ಕಷ್ಟವಾಗಿದೆ. ಹಾಗಾಗಿ ತಕ್ಷಣ ಶಿರಾಡಿಘಾಟ್ ಅನ್ನು ಅತ್ಯಂತ ವೇಗವಾಗಿ ದುರಸ್ಥಿ ಮಾಡಿ ಸಂಚಾರಕ್ಕೆ ಯೋಗ್ಯರೀತಿಯಲ್ಲಿ ಮಾಡುವ

ನಿಟ್ಟಿನಲ್ಲಿ ಸರ್ಕಾರ ಯಾವ ರೀತಿಯಾದ ಮುತುವರ್ಜಿಯನ್ನು ತೆಗೆದುಕೊಂಡಿದೆ. ಇನ್ನು ಎರಡನೆ ಹಂತದ ಕಾಮಗಾರಿಯನ್ನು ಟೆಂಡರ್ ಪ್ರಕ್ರಿಯೆಗಳು ಯಾವಾಗ ಆರಂಭವಾಗುತ್ತದೆ. ಅದನ್ನು ಎಷ್ಟು ದಿವಸದಲ್ಲಿ ಮುಗಿಸಿ ಆ ರಸ್ತೆಯನ್ನು ಸಂಚಾರಕ್ಕೆ ಬಿಡುಗಡೆ ಮಾಡಿಕೊಡುತ್ತೀರೆಂದು ಈ ಬಗ್ಗೆ ಸರ್ಕಾರವು ಸ್ಪಷ್ಟನೆ ಮಾಡಿಕೊಡಬೇಕು.

ಶ್ರೀ ಟಿ.ಬಿ. ಜಯಚಂದ್ರ (ಕಾನೂನು, ಸಂಸದೀಯ ವ್ಯವಹಾರಗಳು, ಪಶುಸಂಗೋಪನೆ ಹಾಗೂ ಮುಜರಾಯಿ ಸಚಿವರು): ಮಾನ್ಯ ಅಧ್ಯಕ್ಷರೆ, ಶಿರಾಡಿ ಘಾಟ್ ಕಾಮಗಾರಿಯನ್ನು ಪೂರ್ಣಗೊಳಿಸುವ ಬಗ್ಗೆ ಸರ್ಕಾರವು ಎಲ್ಲಾ ರೀತಿಯ ಕ್ರಮವನ್ನು ತೆಗೆದುಕೊಂಡಿದೆ. ಆದರೆ ಒಂದನೇ ಹಂತ ಮತ್ತು ಎರಡನೇ ಹಂತವನ್ನು ಯಾವಾಗ ಮುಗಿಸುತ್ತೀರೆಂಬ ಬಗ್ಗೆ ಕಾಲವನ್ನು ಕೇಳಿದ್ದೀರಿ. ಈ ಬಗ್ಗೆ ನಾನು PWD Ministerರವರಿಂದ ಉತ್ತರವನ್ನು ಕೊಡಿಸುತ್ತೇನೆ.

ಅಧ್ಯಕ್ಷರು: O.K.

4. **ವಿಷಯ:** ಎಲ್ಲಾ ಎಸ್ಕಾಂಗಳಲ್ಲಿ ಒಂದು ವರ್ಷ ತರಬೇತಿ ಪಡೆದವರಿಗೂ ನೌಕರಿಗೆ ತೆಗೆದುಕೊಳ್ಳುವ ಬಗ್ಗೆ.

ಶ್ರೀ ಪಿ. ರಾಜೀವ್ (ಕುಡಚಿ): ಎಲ್ಲಾ ESCOMಗಳಲ್ಲಿ ಒಂದು ವರ್ಷದ ತರಬೇತಿ ಪಡೆದವರನ್ನು ನೌಕರಿಗೆ ತೆಗೆದುಕೊಳ್ಳದೆ ಮೂರು ವರ್ಷಗಳ ತರಬೇತಿ ಆದರೆ ಮಾತ್ರ ಅವರಿಗೆ ಅವಕಾಶ ಇದೆ ಎಂದು ಈಗ ನೇಮಕಾತಿಯ ಅವಕಾಶದಿಂದ ಅವರನ್ನು ವಂಚಿತರನ್ನಾಗಿ ಮಾಡುತ್ತಿದ್ದಾರೆ. ಹಾಗಾಗಿ ಒಂದು ವರ್ಷ ತರಬೇತಿ ಪಡೆದವರನ್ನು ಸಹ ನೇಮಕಾತಿಗೆ ಸೇರಿಸಿಕೊಳ್ಳುತ್ತೇವೆಂದು ಇಂಧನ ಸಚಿವರು ಅವರಿಗೆ ಭರವಸೆಯನ್ನು ಕೊಟ್ಟಿದ್ದರು. ಅದಕ್ಕಾಗಿ ಶೂನ್ಯವೇಳೆಯಲ್ಲಿ ಮಾನ್ಯ ಸಚಿವರಿಗೆ ಈ ವಿಷಯವನ್ನು ಮಂಡಿಸುತ್ತಿದ್ದೇನೆ.

ಶ್ರೀ ಟಿ.ಬಿ. ಜಯಚಂದ್ರ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) (ಮಾನ್ಯ ಇಂಧನ ಸಚಿವರ ಪರವಾಗಿ): ಮಾನ್ಯ ಸಭಾಧ್ಯಕ್ಷರೆ, ಮಾನ್ಯ